

## ಪೆಜಕಾಯಿ ರುಚಿ ಬಲ್ಲಿರಾ?

ತುಳುವಿನಲ್ಲಿ ಪೆಜಕಾಯಿ ಎನ್ನುವ ಈ ಸ್ವಾದಿಷ್ಟ ಹಣ್ಣಿಗೆ ಕನ್ನಡದಲ್ಲಿ ಹೆಬ್ಬಲಸು ಎಂಬ ನಾಮಧೇಯವಿದೆ. 'ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದು ಎನ್ನುವಂತೆ ಹಲಸನ್ನು ಹೋಲುವ ಈ ಹಣ್ಣು ಗಾತ್ರದಲ್ಲಿ ಹಲಸಿಗಿಂತ ಚಿಕ್ಕದಾದರೂ ರುಚಿ ಮಾತ್ರ ಅಗಾಧ. ಮಾರ್ಚ್–ಮೇ ತಿಂಗಳಲ್ಲಿ ಮರ ತುಂಬಿ ಹಣ್ಣುಗಳು ಹೊಂಬಣ್ಣದೊಂದಿಗೆ ಶೋಭಿಸುತ್ತವೆ. ಸುಮಾರು 30 ಮೀಟರ್‌ಗಿಂತಲೂ ಹೆಚ್ಚು ಉದ್ದಕ್ಕೆ ಬೆಳೆಯಬಲ್ಲ, ಮೊರಾಸಿಯೆ ಸಸ್ಯ ಕುಟುಂಬಕ್ಕೆ ಸೇರಿದ, ನೇರ ಕಾಂಡದ ಗಟ್ಟಿ ಮರ ಕಟ್ಟಡ ನಿರ್ಮಾಣಕ್ಕೆ ಯೋಗ್ಯವೆನಿಸಿದೆ.

ಹಸುರು ಕಾಯಿಯ ಮೈಮೇಲೆ ಹಲಸಿನಂತೆ ಮುಳ್ಳುಗಳಿದ್ದು, ಇದು ಬಲಿತು ಮಾಗಿದಾಗ ಹಳದಿ ಬಣ್ಣಕ್ಕೆ ತಿರುಗಿ ಮೆದುವಾಗುತ್ತದೆ. ತೊಟ್ಟು ದೃಢವಾಗಿರುತ್ತದೆ. ಹಣ್ಣಿನ ಹೊರ ಕವಚ ಸುಲಿದರೆ ಒಳಗೆ ಗಾಢ ಅರಿಶಿನ ವರ್ಣದ ತೊಳೆಗಳು ಒತ್ತೊತ್ತಾಗಿ ಕಾಣಸಿಗುತ್ತವೆ. ಹಣ್ಣುಗಳು ಸಿಹಿರುಚಿಯಾಗಿದ್ದು ಬಾಯಲ್ಲಿ ನೀರೂರಿಸುತ್ತವೆ. ಹಣ್ಣೊಳಗಿರುವ ಬಿಳಿ ಬೀಜಗಳನ್ನೂ ಬೇಯಿಸಿ ತಿನ್ನಲು ಸಾಧ್ಯ. ಕಾಯಿಗಳನ್ನು ಉಪ್ಪುನೀರಲ್ಲಿ ನೆನೆಸಿಟ್ಟು ಮಳೆಗಾಲದಲ್ಲಿ ಪಲ್ಯ ಮಾಡಲು ಬಳಸುತ್ತಾರೆ. ಚಿಕ್ಕಂದಿನಲ್ಲಿ ದೊಡ್ಡ ಮರಗಳಿಂದ ಹಣ್ಣು ಕೊಯ್ಯುವುದೇ ಸಮಸ್ಯೆಯಾಗಿತ್ತು. ಉದ್ದ ಕೋಲಿಗೆ ಕೊಕ್ಕೆ ಕಟ್ಟಿ ಎಟುಕಿದಷ್ಟು ಕೊಯ್ಯುತ್ತಿದ್ದೆವು. ಹಣ್ಣು ಕೆಳಕ್ಕೆ ಬಿದ್ದು ಅಪ್ಪಚ್ಚಿಯಾದರೂ ತೊಳೆಗಳನ್ನು ಜತನದಿಂದಾಯ್ದು ಮರದ ಬುಡದಲ್ಲೇ ಸವಿಯುತ್ತಿದ್ದುದು ಈಗಿನ್ನೂ ನೆನಪು. ಈಗಂತೂ ಈ ಹಣ್ಣಿನ ಮರಗಳೇ ಕಾಣಸಿಗದೆ ಅಪರೂಪವೆನಿಸಿದೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ



## ಇವು ಲಗೋರಿ ಕಲ್ಲುಗಳಲ್ಲ

ಯಾರೋ ಲಗೋರಿ ಆಟವಾಡಲು ಕಲ್ಲುಗಳನ್ನು ಒಂದರ ಮೇಲೊಂದರಂತೆ ಜೋಡಿಸಿಟ್ಟಿರುವಂತೆ ಕಾಣುವ ಈ ಬೃಹತ್ ಕಲ್ಲುಗಳು ಬೆಟ್ಟವೊಂದರ ಭಾಗ. ರಾಯಚೂರು ಜಿಲ್ಲೆಯ ಮಾನವಿ ತಾಲ್ಲೂಕಿನಲ್ಲಿ ಬರುವ ಹನುಮಯ್ಯ ತಾತನ ಬೆಟ್ಟದ ಬಳಿ ಕಾಣುವ ಈ ಬಂಡೆಕಲ್ಲುಗಳು ನೋಡುಗರನ್ನು ಚಕಿತಗೊಳಿಸುತ್ತವೆ. ಸೃಷ್ಟಿಯ ಸೊಬಗು, ಅಚ್ಚರಿಗಳಲ್ಲಿ ಇದೂ ಒಂದಾಗಿದೆ. ಈ ದೊಡ್ಡ ದೊಡ್ಡ ಕಲ್ಲುಗಳು ಒಂದರ ಮೇಲೆ ಒಂದರಂತೆ ಅನೇಕ ವರ್ಷಗಳಿಂದ ಗಟ್ಟಿಯಾಗಿ ನೆಲೆನಿಂತಿವೆ.

—ಈರಣ್ಣ ಬೆಂಗಾಲಿ, ರಾಯಚೂರು

